


Scanned with CamScanner




Scanned with CamScanner

# ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ
# ಕೇಂದ್ರದಲ್ಲಿ ನಡೆದ ವೆಬಿನಾರ್ ಕಾರ್ಯಕ್ರಮ

**ಚಾಮರಾಜನಗರ, ಏ 28** – ಸುವರ್ಣಗಂಗೋತ್ರಿಯ ಡಾ. ಬಿ.ಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿಂದು ವಾಣಿಜ್ಯ ಹಾಗೂ ನಿರ್ವಹಣಾ ಶಾಸ್ತ್ರ ವಿಭಾಗ ಮತ್ತು ಭಾರತೀಯ ಮ್ಯುಚ್ಯುವಲ್ ಫಂಡ್ ಒಕ್ಕೂಟದ ಸಹಯೋಗದಲ್ಲಿ ಒಂದು ದಿನದ ರಾಷ್ಟ್ರಮಟ್ಟದ ವಿಚಾರ (ವೆಬಿನಾರ್) ಸಂಕಿರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾನಾಡಿದ ಡಾ. ಬಿ.ಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಪ್ರೊ. ಆರ್. ಮಹೇಶ್ ಅವರು ಇಂದಿನ ಯುವ ಸಮುದಾಯ ಷೇರು ಮಾರುಕಟ್ಟೆ, ವ್ಯಾಪಾರ, ವಾಣಿಜ್ಯ ವ್ಯವಹಾರ, ಬ್ಯಾಂಕಿಂಗ್ ಮತ್ತು ಸಹಕಾರ ಕ್ಷೇತ್ರದಲ್ಲಿ ಹೂಡಿಕೆದಾರರಾಗಲು ಮತ್ತು ಅದರಲ್ಲಿ ತೊಡಗಿಸಿಕೊಳ್ಳಬೇಕಾದರೆ ಷೇರು ಮಾರುಕಟ್ಟೆ ವ್ಯವಸ್ಥೆಯ ಜ್ಞಾನದ ಅರಿವು ಪಡೆಯಬೇಕು. ಈ ನಿಟ್ಟಿನಲ್ಲಿ ಭಾರತೀಯ ಮ್ಯುಚ್ಯುವಲ್ ಫಂಡ್ ಒಕ್ಕೂಟ ವೆಬಿನಾರ್ ಆಯೋಜಿಸಿರುವುದು ಹೆಮ್ಮೆಯ ಸಂಗತಿ ಎಂದರು.

ಹಣಕಾಸು ಸಬಲೀಕರಣ ಮತ್ತು ಭದ್ರತಾ ಮಾರುಕಟ್ಟೆಗಳಲ್ಲಿ ಉದ್ಯೋಗಾವಕಾಶಗಳ ಕುರಿತು ಭಾರತೀಯ ಭದ್ರತಾ ವಿನಿಮಯ ಮಂಡಳಿಯ ಡೆಪ್ಯೂಟಿ ಜನರಲ್ ಮ್ಯಾನೇಜರ್ ಚೇತನ್ ಪರ್ನಾಕಿ ಹಾಗೂ ಷೇರು ಮಾರುಕಟ್ಟೆಯಲ್ಲಿ ಉದ್ಯೋಗಾವಕಾಶಗಳ ಕುರಿತು ಎ. ಎಂ. ಎಫ್.ಐ (ಭಾರತೀಯ ಸಂಚಿತ ಹಣಕಾಸು ಒಕ್ಕೂಟ) ಹಿರಿಯ ಮಾರ್ಗದರ್ಶಕರಾದ ಸೂರ್ಯಕಾಂತ್ ಶರ್ಮ ಮತ್ತು ಸಾಮಾನ್ಯ ವ್ಯಕ್ತಿಗಳು ಮತ್ತು ಕೃಷಿ ಷೇರು ಮಾರುಕಟ್ಟೆ ಕುರಿತು ಡಾ. ಎಂ.ಬಿ ಮಹೇಶ್ ಅವರು ವಿಶೇಷ ಉಪನ್ಯಾಸ ನೀಡಿದರು.

ವಾಣಿಜ್ಯ ಹಾಗೂ ನಿರ್ವಹಣಾ ಶಾಸ್ತ್ರ ಮತ್ತು ಅರ್ಥಶಾಸ್ತ್ರದ ಸುಮಾರು 1100ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೊಂದಣಿಯಾಗಿ ರಾಷ್ಟ್ರೀಯ ವೆಬಿನಾರ್‌ನಲ್ಲಿ ಪಾಲ್ಗೊಂಡಿದ್ದರು. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಕೇಂದ್ರದಿಂದ ಇ-ಸರ್ಟಿಫಿಕೇಟ್ ನೀಡಲಾಯಿತು.

ಸಂಯೋಜಕರಾದ ಕಮೀಲ ತಬ್ಬುಸಮ್, ಡಾ. ಎಂ. ಬಿ. ಮಹೇಶ್ ಹಾಗೂ ಉಪನ್ಯಾಸಕರಾದ ಲಕ್ಷ್ಮಿ ಮನೋಹರ್, ಹರ್ಷವರ್ಧನ್, ಡಾ. ಸುಮಂತ್, ನಂಜುಂಡಸ್ವಾಮಿ, ಮಹದೇವಸ್ವಾಮಿ, ದೀಪ ಇನ್ನಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

Scanned with CamScanner